# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1109 |
| ಸದಸ್ಯರು ಹೆಸರು | : | ಶ್ರೀ ಮಂಜುನಾಥ್ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 12.03.2026 |
| ಉತ್ತರಿಸುವ ಸಚಿವರು | : | ಗೃಹ ಸಚಿವರು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಂಚಾರ ನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿಯ ಮೂಲಕ ವಾಹನ ಸಂಚಾರವನ್ನು ಸುಗಮಗೊಳಿಸಲು ಗೃಹ ಇಲಾಖೆಯ ಸಂಚಾರಿ ಪೊಲೀಸ್ ವಿಭಾಗ ಕೈಗೊಂಡಿರುವ ಕ್ರಮಗಳೇನು; | ರಾಜ್ಯದಲ್ಲಿ ನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿ, ಸಂಚಾರವನ್ನು ಸುಗಮಗೊಳಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ:-<br><br>• Intelligent Traffic Management System (ITMS) ವ್ಯವಸ್ಥೆಯ Automatic Number Plate Recognition (ANPR) ಕ್ಯಾಮರಾಗಳನ್ನು ಈ ಕೆಳಕಂಡ ಘಟಕಗಳಲ್ಲಿ ಈಗಾಗಲೇ ಅಳವಡಿಸಲಾಗಿರುತ್ತದೆ. ಸದರಿ ಕ್ಯಾಮರಾಗಳ ಮೂಲಕ Over speeding, Speaking on cell phone while driving (driver on call), Not wearing seat belt while driving, Triple riding, Not wearing helmet, Line Discipline Violation & Red light Signal jumping ಸಂಚಾರ ನಿಯಮ ಉಲ್ಲಂಘನೆಗಳನ್ನು ಸೆರೆಹಿಡಿದು, ಉಲ್ಲಂಘನಾದಾರರಿಗೆ ದಂಡ ವಿಧಿಸುವ ಮೂಲಕ ಸಂಚಾರ ನಿರ್ವಹಣೆ ಮಾಡಲಾಗುತ್ತಿದೆ.<br><br>➢ ಬೆಂಗಳೂರು ನಗರ<br>➢ ಮೈಸೂರು ನಗರ<br>➢ ಹುಬ್ಬಳ್ಳಿ-ಧಾರವಾಡ ನಗರ<br>➢ ಬೆಳಗಾವಿ ನಗರ<br>➢ ಮಂಗಳೂರು ನಗರ<br>➢ ಕಲಬುರಗಿ ನಗರ<br>➢ ತುಮಕೂರು ಜಿಲ್ಲೆ<br>➢ ದಾವಣಗೆರೆ ಜಿಲ್ಲೆ<br>➢ ಶಿವಮೊಗ್ಗ ಜಿಲ್ಲೆ<br>➢ ಬೆಂಗಳೂರು-ಮೈಸೂರು ಆಕ್ಸೆಸ್ ಕಂಟ್ರೋಲ್ಡ್ ರಾಷ್ಟ್ರೀಯ ಹೆದ್ದಾರಿ (ಎನ್‌ಹೆಚ್-275) (ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಮಂಡ್ಯ ಜಿಲ್ಲೆ)<br>➢ ಮೈಸೂರು ಜಿಲ್ಲೆ<br>➢ ಬಾಗಲಕೋಟೆ ಜಿಲ್ಲೆ<br>➢ ಗದಗ ಜಿಲ್ಲೆ<br>➢ ಯಾದಗಿರಿ ಜಿಲ್ಲೆ |

- ನಗರ ಪ್ರದೇಶಗಳಲ್ಲಿ ಅತಿ ಹೆಚ್ಚು ಸಂಚಾರ ದಟ್ಟಣೆ ರಸ್ತೆಗಳಲ್ಲಿ ಏಕಮುಖ ಸಂಚಾರ ವ್ಯವಸ್ಥೆ ಜಾರಿ.
- ನಗರ ಪ್ರದೇಶಗಳಲ್ಲಿ ಬಲತಿರುವು ಮತ್ತು "ಯು"ತಿರುವುಗಳ ನಿಷೇಧ.
- ನಗರ ಪ್ರದೇಶಗಳಲ್ಲಿ ಪೀಕ್ ಅವರ್ಸ್ ನಲ್ಲಿ ಭಾರಿ ವಾಹನಗಳ ಸಂಚಾರವನ್ನು ನಿಷೇಧ ಮಾಡಲಾಗಿರುತ್ತದೆ.
- ನಗರ ಪ್ರದೇಶಗಳ ಪ್ರಮುಖ ಜಂಕ್ಷನ್‌ಗಳಲ್ಲಿ ಟ್ರಾಫಿಕ್ ಸಿಗ್ನಲ್ ಲೈಟ್‌ಗಳ ಅಳವಡಿಕೆ ಮಾಡಲಾಗಿರುತ್ತದೆ.

ಅತೀ ಹೆಚ್ಚು ಸಂಚಾರ ದಟ್ಟಣೆ ಉಂಟಾಗುವ ಬೆಂಗಳೂರು ನಗರ ಪ್ರದೇಶದಲ್ಲಿ ಸಂಚಾರ ನಿರ್ವಹಣೆಗಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಾಗಿರುತ್ತದೆ:-

- ಅತಿ ಹೆಚ್ಚು ಸಂಚಾರ ದಟ್ಟಣೆ ರಸ್ತೆಗಳಲ್ಲಿ ಏಕಮುಖ ಸಂಚಾರ ವ್ಯವಸ್ಥೆ ಜಾರಿ.
- ಪ್ರಮುಖ ರಸ್ತೆಗಳಲ್ಲಿ ವಾಹನಗಳ ನಿಲುಗಡೆ ನಿಷೇಧ.
- ಬಲತಿರುವು ಮತ್ತು "ಯು"ತಿರುವುಗಳ ನಿಷೇಧ
- ಸಂಚಾರ ನಿರ್ವಹಣಾ ಕೇಂದ್ರವನ್ನು ಸ್ಥಾಪಿಸಿದ್ದು, ಸುಗಮ ಸಂಚಾರಕ್ಕೆ ಅಗತ್ಯವಾದ ಕ್ರಮಗಳನ್ನು ನಿರ್ವಹಣೆ ಮಾಡುವಲ್ಲಿ ಹಾಗೂ ನಿಗಾವಣೆ ಮಾಡುವಲ್ಲಿ ಯಶಸ್ವಿಯಾಗಿ ವಿವಿಧ ಸಂಚಾರ ದಟ್ಟಣೆ ನಿವಾರಣಾ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಗುತ್ತಿದೆ.
- ಸಂಚಾರ ನಿಯಂತ್ರಣ ಮತ್ತು ನಿರ್ವಹಣೆಗೆ ಗೃಹ ರಕ್ಷಕ ಸಿಬ್ಬಂದಿ ಮತ್ತು ಟ್ರಾಫಿಕ್ ವಾರ್ಡನ್ ಗಳ ತೊಡಗಿಸಿಕೊಳ್ಳುವಿಕೆ.
- ಸಂಚಾರ ನಿಯಮ ಉಲ್ಲಂಘನೆ ಎಸಗುವವರ ವಿರುದ್ಧ ವಿಶೇಷ ಕಾರ್ಯಚರಣೆ.
- ಪೆಲಿಕಾನ್ ಸಿಗ್ನಲ್ ಲೈಟ್‌ಗಳ ಅಳವಡಿಕೆ.
- ಸಂಚಾರ ನಿರ್ವಹಣೆಯಲ್ಲಿ ಆಧುನಿಕ ತಂತ್ರಜ್ಞಾನದ ಅಳವಡಿಕೆ.
- ಅವೈಜ್ಞಾನಿಕ ರಸ್ತೆ ಉಬ್ಬುಗಳ ತೆರವು & ವೈಜ್ಞಾನಿಕ ರಸ್ತೆ ಉಬ್ಬುಗಳ ನಿರ್ಮಾಣ.
- ಸಂಪರ್ಕ ರಹಿತ ನಿಯಮ ಜಾರಿಗೆ ಹೆಚ್ಚು ಉತ್ತೇಜನ.
- ಅಡ್ಡಾದಿಡ್ಡಿ ವಾಹನಗಳ ನಿಲುಗಡೆ ನಿಯಂತ್ರಣ.
- ಅತಿ ವೇಗವಾಗಿ ಚಲಿಸುವ ವಾಹನಗಳಿಗೆ ನಿಯಂತ್ರಣ.
- ಅಪಾಯಕಾರಿ ರೀತಿಯಲ್ಲಿ ಚಲಿಸುವ ವಾಹನ ಚಾಲಕ / ಸವಾರರ ವಿರುದ್ಧ ಪರಿಣಾಮಕಾರಿ ಕ್ರಮ.
- ಹೈಡೆನ್ಸಿಟಿ ಕಾರಿಡಾರ್ ರಸ್ತೆಗಳನ್ನು ಗುರುತಿಸಲಾಗಿರುತ್ತದೆ.
- ಅತಿ ಹೆಚ್ಚು ದಟ್ಟಣೆ ಉಂಟಾಗುತ್ತಿರುವ ಜಂಕ್ಷನ್‌ಗಳು ಹಾಗೂ ರಸ್ತೆಗಳ ಗುರುತಿಸುವಿಕೆ.
- ನಗರದೊಳಗೆ ಪೀಕ್ ಅವರ್ಸ್ ವೇಳೆಯಲ್ಲಿ ಭಾರೀ ವಾಹನಗಳ ಸಂಚಾರ ನಿಷೇದ.
- ದಟ್ಟಣೆ ನಿವಾರಿಸಲು ಐ.ಟಿ.ಎಂ.ಎಸ್. ತಂತ್ರಜ್ಞಾನದ ಬಳಕೆ
- ಎ.ಐ. ತಂತ್ರಜ್ಞಾನ ಆಧಾರಿತ ಸಿಗ್ನಲ್‌ಗಳ ಅನುಷ್ಠಾನ
- ಡ್ರೋನ್ ಕ್ಯಾಮರಾಗಳ ಬಳಕೆ
- 169 ಸಿಗ್ನಲ್‌ಗಳನ್ನು ಅಡಾಪ್ಟೀವ್ ಸಿಗ್ನಲ್‌ಗಳಾಗಿ ಪರಿವರ್ತನೆ

| | | |
|---|---|---|
| | | ಇತ್ಯಾದಿ.<br>ವಿವಿಧ ಪೌರ ಸಂಸ್ಥೆಗಳ ಅಧಿಕಾರಿಗಳೊಂದಿಗೆ ಸಮನ್ವಯ ಸಮಿತಿ ಸಭೆಯ ಆಯೋಜನೆ. |
| ಆ) | ನಗರ ಪ್ರದೇಶಗಳಲ್ಲಿ, ವಿಶೇಷವಾಗಿ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಸಂಚಾರಕ್ಕೆ ಅಡ್ಡಿಯಾಗುತ್ತಿರುವ ಅನಧಿಕೃತ ಮಾರುಕಟ್ಟೆ ವಿಸ್ತರಣೆಗಳು, ಫುಟ್‌ಪಾತ್ ಅತಿಕ್ರಮಣಗಳು ಹಾಗೂ ಅನಗತ್ಯ ವಸ್ತುಗಳನ್ನು ತೆರವುಗೊಳಿಸಲು ಸರ್ಕಾರ ಸ್ಥಳೀಯ ಸಂಸ್ಥೆಗಳೊಂದಿಗೆ ಸಂಯೋಜನೆ ಮಾಡಿ ಕೈಗೊಂಡಿರುವ ಕ್ರಮಗಳೇನು; | ನಗರ ಪ್ರದೇಶ ವ್ಯಾಪ್ತಿಯಲ್ಲಿ ಅನಧಿಕೃತ ಮಾರುಕಟ್ಟೆ ವಿಸ್ತರಣೆಗಳು, ಫುಟ್‌ಪಾತ್ ಅತಿಕ್ರಮಣಗಳ ಬಗ್ಗೆ ನಗರಸಭೆಯ ವತಿಯಿಂದ ಕಾರ್ಯಕೈಗೊಂಡಿದ್ದಲ್ಲಿ ಸಮನ್ವಯ ಸಾಧಿಸಿ ಸೂಕ್ತ ಕ್ರಮ ವಹಿಸಲಾಗುತ್ತಿದೆ. ಹಾಗೂ ಸ್ಥಳೀಯ ಸಂಸ್ಥೆಗಳ ಸಹಯೋಗದಲ್ಲಿ ಬೀದಿ ವ್ಯಾಪಾರಸ್ಥರಿಗೆ ಪ್ರತ್ಯೇಕವಾಗಿ ಸ್ಥಳಗಳನ್ನು ಗುರುತಿಸಿ ವ್ಯಾಪಾರ ಮಾಡಲು ಅನುಕೂಲ ಮಾಡಿಕೊಡಲಾಗಿದೆ. ಮತ್ತು ಸಾರ್ವಜನಿಕ ಸುಗಮ ಸಂಚಾರಕ್ಕೆ ಅಡೆ ತಡೆಯಾಗದಿರುವ ಉದ್ದೇಶದಿಂದ ನೋ-ಪಾರ್ಕಿಂಗ್ ಫಲಕಗಳನ್ನು ಅಳವಡಿಸಿ ಅನಧಿಕೃತವಾಗಿ ರಸ್ತೆ ಮೇಲೆ ವಾಹನಗಳನ್ನು ನಿಲ್ಲಿಸದಂತೆ ಕ್ರಮ ವಹಿಸಿರುತ್ತದೆ. |
| ಇ) | ಸಾರಿಗೆ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ಪುನರಾವರ್ತಿತ ಸಂಚಾರ ನಿಯಮಗಳ ಉಲಂಘಿತರನ್ನು ಸ್ವಯಂಚಾಲಿತವಾಗಿ ವಾಹನ ಮತ್ತು ಚಾಲನಾ ಪರವಾನಿಗೆ ಪರತ್ತುಗಳನ್ನು ದಾಖಲಿಸಿ ಎಚ್ಚರಿಕೆ ನೀಡುವ ಬಗ್ಗೆ ಪ್ರಮಾಣೀಕೃತ ಕಾರ್ಯ ವಿಧಾನವನ್ನು ರೂಪಿಸಿದೆಯೇ; ಈ ಕುರಿತು ಸರ್ಕಾರದ ಕಾರ್ಯಕ್ರಮಗಳೇನು; | • ರಾಜ್ಯದ ಎಲ್ಲಾ ಘಟಕಗಳಲ್ಲಿ ಬೆಂಗಳೂರು ನಗರ ಒಳಗೊಂಡಂತೆ ಐ.ಎಂ.ವಿ. ಕಾಯ್ದೆ ರೀತ್ಯಾ ಸೂಚಿಸಿರುವ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಸ್ತೆ ಸುರಕ್ಷತಾ ಸಮಿತಿ ರವರು ಸೂಚಿಸಿರುವ ನಿಯಮ ಉಲ್ಲಂಘನೆಗಳಲ್ಲಿ ಕಡ್ಡಾಯವಾಗಿ ಚಾಲನಾ ಪರವಾನಗಿಯನ್ನು ಅಮಾನತ್ತುಗೊಳಿಸಲು ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಕಛೇರಿಗೆ ಕಳುಹಿಸಲು ಕ್ರಮ ಕೈಗೊಂಡಿರುತ್ತದೆ.<br>• ಪುನರಾವರ್ತಿತ ಸಂಚಾರ ನಿಯಮ ಉಲ್ಲಂಘಿತರನ್ನು ಸಂಚಾರ ವಿಭಾಗದಿಂದ ಸ್ವಯಂ ಚಾಲಿತವಾಗಿ ವಾಹನ ಮತ್ತು ಚಾಲನಾ ಪರವಾನಗಿ ಪರತ್ತುಗಳನ್ನು ದಾಖಲಿಸಿ ಎಚ್ಚರಿಕೆ ನೀಡುವ ಬಗ್ಗೆ ಪ್ರಮಾಣೀಕೃತ ಕಾರ್ಯ ವಿಧಾನವನ್ನು ರೂಪಿಸಿರುವುದಿಲ್ಲ. |
| ಈ) | ರಾಜ್ಯದಲ್ಲಿ ಸಂಚಾರ ದಟ್ಟಣೆ ನಿಯಂತ್ರಣಕ್ಕಾಗಿ ವಿಶೇಷ ಸಂಚಾರ ಪೊಲೀಸ್ ಸಿಬ್ಬಂದಿ ನೇಮಕ, ತಾಂತ್ರಿಕ ಸಾಧನಗಳಾದ ಸಿಸಿಟಿವಿ, ಸ್ಮಾರ್ಟ್ ಸಿಗ್ನಲ್ ವ್ಯವಸ್ಥೆ ಇತ್ಯಾದಿಗಳ ಬಳಕೆ ಹಾಗೂ ಜಾಗೃತಿ ಅಭಿಯಾನಗಳ ಬಗ್ಗೆ ಕೈಗೊಂಡಿರುವ ಕ್ರಮಗಳೇನು; | • Intelligent Traffic Management System (ITMS) ವ್ಯವಸ್ಥೆಯ Automatic Number Plate Recognition (ANPR) ಕ್ಯಾಮರಾಗಳನ್ನು ಈ ಕೆಳಕಂಡ ಘಟಕಗಳಲ್ಲಿ ಈಗಾಗಲೇ ಅಳವಡಿಸಲಾಗಿರುತ್ತದೆ. ಸದರಿ ಕ್ಯಾಮರಾಗಳ ಮೂಲಕ Over speeding, Speaking on cell phone while driving (driver on call), Not wearing seat belt while driving, Triple riding, Not wearing helmet, Line Discipline Violation & Red light Signal jumping ಸಂಚಾರ ನಿಯಮ ಉಲ್ಲಂಘನೆಗಳನ್ನು ಸೆರೆಹಿಡಿದು, ಉಲ್ಲಂಘನಾದಾರರಿಗೆ ದಂಡ ವಿಧಿಸುವ ಮೂಲಕ ಸಂಚಾರ ನಿರ್ವಹಣೆ ಮಾಡಲಾಗುತ್ತಿದೆ :-<br>➢ ಬೆಂಗಳೂರು ನಗರ<br>➢ ಮೈಸೂರು ನಗರ<br>➢ ಹುಬ್ಬಳ್ಳಿ-ಧಾರವಾಡ ನಗರ<br>➢ ಬೆಳಗಾವಿ ನಗರ<br>➢ ಮಂಗಳೂರು ನಗರ<br>➢ ಕಲಬುರಗಿ ನಗರ<br>➢ ತುಮಕೂರು ಜಿಲ್ಲೆ<br>➢ ದಾವಣಗೆರೆ ಜಿಲ್ಲೆ |

- ಶಿವಮೊಗ್ಗ ಜಿಲ್ಲೆ
- ಬೆಂಗಳೂರು ಮೈಸೂರು ಆಕ್ಸಿಸ್ ಕಂಟ್ರೋಲ್ಡ್ ರಾಷ್ಟ್ರೀಯ ಹೆದ್ದಾರಿ (ಎನ್‌ಹೆಚ್-275) (ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಮಂಡ್ಯ ಜಿಲ್ಲೆ)
- ಮೈಸೂರು ಜಿಲ್ಲೆ
- ಬಾಗಲಕೋಟೆ ಜಿಲ್ಲೆ
- ಗದಗ ಜಿಲ್ಲೆ
- ಯಾದಗಿರಿ ಜಿಲ್ಲೆ

**ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಸಂಚಾರ ವಿಭಾಗದಿಂದ ಪರಿಚಯಿಸಿರುವ ಅಧುನಿಕ ತಂತ್ರಜ್ಞಾನಗಳು :**

- **ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್**

  ಬೆಂಗಳೂರು ನಗರ ಸಂಚಾರ ಪೊಲೀಸ ಘಟಕವು ತಂತ್ರಜ್ಞಾನದ ಬಳಕೆ ಹಾಗೂ ಸಂಯೋಜನೆಗಳನ್ನು ಸುಗಮ, ಸುರಕ್ಷಿತ ಸಂಚಾರ ನಿರ್ವಹಣೆಗಾಗಿ ಹಲವಾರು ಉಪ ಕ್ರಮಗಳನ್ನು ಕೈಗೊಂಡಿದೆ. ಅಂತಹ ಹಲವು ತಂತ್ರ ಜ್ಞಾನಗಳಲ್ಲಿ ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (ಐ.ಟಿ.ಎಂ.ಎಸ್) ಕೂಡ ಒಂದಾಗಿರುತ್ತದೆ. ಈ ವ್ಯವಸ್ಥೆಯಲ್ಲಿ ಎನ್.ಎನ್.ಪಿ.ಆರ್. ಹಾಗೂ ಆರ್.ಎಲ್.ವಿ.ಡಿ. ಕ್ಯಾಮೆರಾಗಳನ್ನು ಅಳವಡಿಲಾಗಿದ್ದು, ಸಂಪರ್ಕರಹಿತ ಸ್ವಯಂ ಚಾಲಿತ ಸಂಚಾರ ಉಲ್ಲಂಘನೆ ಪತ್ತೆ ಮತ್ತು ನಿಯಮ ಜಾರಿಗಾಗಿ ಇರುವ ಉತ್ತಮ ವ್ಯವಸ್ಥೆಯಾಗಿರುತ್ತದೆ.

- **ಎಟಿಸಿಎ ಸಿಗ್ನಲ್‌ಗಳು :**

  ಅಡಾಪ್ಟೀವ್ ಟ್ರಾಫಿಕ್ ಕಂಟ್ರೋಲ್ ಸಿಸ್ಟಮ್ ಮತ್ತು ಸಿಗ್ನಲ್ ಸಂಚಾರದ ಹರಿವನ್ನು ಹೆಚ್ಚು ವ್ಯವಸ್ಥಿತವಾಗಿ ಮಾಡಲು ಬಳಸಲಾಗುತ್ತಿದೆ. ಈ ತಂತ್ರಾಜ್ಞಾನದ ಅಳವಡಿಕೆಯಿಂದ ಸ್ಮಾರ್ಟ್ ಟ್ರಾಫಿಕ್ ಕಂಟ್ರೋಲಿಂಗ್ ನಿರ್ವಹಣೆಯನ್ನು ಕೈಗೊಳ್ಳಲು ಸಹಕಾರಿಯಾಗಿದೆ.

  ಸಂಚಾರದ ಹರಿವಿನೊಂದಿಗೆ ಹೊಂದಿಕೊಂಡು ಹಸಿರು ಸಮಯದ ಪರಿಣಾಮಕಾರಿ ಬಳಕೆಯಿಂದ ಸುಗಮ ಸಂಚಾರ ನಿರ್ವಹಣೆಯಾಗುತ್ತಿದೆ.

- **ಅಸ್ತ್ರಂ (Actionable intelligence for Sustainable Traffic Management) :**

  ಎಂಬ ವಿನೂತನ ಉಪಕ್ರಮವು ನಗರದಸಂಚಾರದ ಹರಿವಿನ ಬಗ್ಗೆ ಒಳನೋಟಗಳನ್ನು ನೀಡುವ ಸ್ಮಾರ್ಟ್ ಟ್ರಾಫಿಕ್ ಇಂಜಿನ್ ಇದಾಗಿದೆ. ಇದು ಪರಿಣಾಮಕಾರಿಯಾದ ಸಂಚಾರ ನಿರ್ವಹಣೆಗೆ ಲಭ್ಯವಿರುವ ದತ್ತಾಂಶವನ್ನು ಬಳಸಿಕೊಂಡು ಸೂಕ್ತ ಕ್ರಮ ಜರುಗಿಸಿ ಸುಗಮ ಸಂಚಾರ ನಿರ್ವಹಣೆಗೆ ಅನುವು ಮಾಡಿಕೊಡುತ್ತದೆ. ಇದರಲ್ಲಿ ಮುಖ್ಯವಾಗಿ ಕಂಜೆಷನ್ ಅಲರ್ಟ್

| | | |
|---|---|---|
| | | ಗಳು, ಬಿಓಟಿ ಆಧಾರಿತ ಇನ್ಸಿಡೆಂಟ್ ಫೋರ್ಟಿಂಗ್ ಹಾಗೂ ಇವೆಂಟ್ ಮ್ಯಾನೇಜ್‌ಮೆಂಟ್ ಮತ್ತು ಡ್ಯಾಶ್‌ಬೋರ್ಡ್ ಅನಾಲಿಟಿಕ್ಸ್‌ಗಳನ್ನು ಒಳಗೊಂಡಿರುತ್ತದೆ.<br><br>**ಇ-ಪಾತ್ ಆಂಬ್ಯೂಲೆನ್ಸ್ ಆ್ಯಪ್** : ಈ ಉಪಕ್ರಮದಿಂದ ನಗರದಲ್ಲಿ ಸಂಚರಿಸುವ ಆಂಬ್ಯುಲೆನ್ಸ್‌ಗಳ ಸುಗಮ ಸಂಚಾರಕ್ಕೆ ಬಹಳ ಸಹಾಯವಾಗುತ್ತದೆ. ಸಂಚಾರ ನಿರ್ವಹಣಾ ಕೇಂದ್ರದಲ್ಲಿ ಆಂಬ್ಯೂಲೆನ್ಸ್‌ಗಳನ್ನು ನೋಂದಾಯಿಸಿಕೊಂಡು ಅವುಗಳು ಪ್ರಯಾಣ ಪ್ರಾರಂಭಿಸುವ ಮತ್ತು ತಲುಪಬೇಕಾದ ಸ್ಥಳಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಅವುಗಳ ಸಂಚರಣೆಯನ್ನು ಪರಿಶೀಲಿಸಲಾಗುತ್ತದೆ. 120 ಸೆಕೆಂಡ್‌ಗಳಿಗೆ ಮೀರಿದ ಅವಧಿಯವರೆಗೆ ಯಾವುದೇ ಆಂಬ್ಯೂಲೆನ್ಸ್ ಸಂಚಾರ ದಟ್ಟಣೆಯಲ್ಲಿ ಸಿಕ್ಕಿ ಹಾಕಿ ಕೊಂಡಲ್ಲಿ ಈ ಆ್ಯಪ್ ಮುಖೇನ ಎಸ್.ಓ.ಎಸ್. ಬಟನ್ ಆ್ಯಕ್ಟಿವೇಟ್ ಆಗಿ ಕೂಡಲೆ ಅತ್ತ ಕಡೆ ಗಮನ ಹರಿಸಿ ಸಂಚಾರ ದಟ್ಟಣೆ ನಿವಾರಣೆ ಮಾಡಲು ಮಾಹಿತಿ ರವಾನೆಯಾಗುತ್ತದೆ. ಈಗಾಗಲೇ 108 ಆಂಬ್ಯುಲೆನ್ಸ್ ಹಾಗೂ ಖಾಸಗಿ ಆಂಬ್ಯುಲೆನ್ಸ್ ಗಳನ್ನು ಆನ್‌ಬೋರ್ಡ್ ಮಾಡಿಕೊಳ್ಳಲಾಗಿದ್ದು, ಸಾಕಷ್ಟು ಉತ್ತಮ ರೀತಿಯಲ್ಲಿ ತುರ್ತು ವಾಹನಗಳಿಗೆ ನಿರ್ಗಳ ಸಂಚಾರ ರ ಕಲ್ಪಿಸಲಾಗುತ್ತಿದೆ.<br><br>**ಡ್ರೋನ್ ಕ್ಯಾಮರಾ** : ಬೆಂಗಳೂರು ನಗರ ಸಂಚಾರ ವಿಭಾಗವು ಹಾಲಿ 10 ಡ್ರೋನ್ ಕ್ಯಾಮೆರಾಗಳನ್ನು ಬಳಸುತ್ತಿದ್ದು ಬೆಳಗಿನ ಮತ್ತು ಸಂಜೆಯ ಪೀಕ್ ಅವರ್‌ಗಳ ಸಮಯದಲ್ಲಿ ಸಂಚಾರದ ಹರಿವನ್ನು ನಿಗಾವಣೆ ಮಾಡಲು ಬಳಸಲಾಗುತ್ತಿದೆ. ಈ ಕ್ಯಾಮೆರಾಗಳಿಂದ ಬರುವ ವಿಡಿಯೋಗಳನ್ನು ಸಂಚಾರ ನಿರ್ವಹಣಾ ಕೇಂದ್ರದಲ್ಲಿ ನೇರ ಪ್ರಸಾರದಲ್ಲಿ ವೀಕ್ಷಿಸಬಹುದಾಗಿದೆ.<br><br>ಬೆಂಗಳೂರು ಸಂಚಾರ ವಿಭಾಗದಿಂದ ಪರಿಚಯಿಸಲಾಗಿರುವ ಎಲ್ಲಾ ಅತ್ಯಾಧುನಿಕ ತಂತ್ರಜ್ಞಾನಗಳ ಬಗ್ಗೆ ಸಾಮಾಜಿಕ ಜಾಲತಾಣಗಳ ಮೂಲಕ ಅರಿವು ಮೂಡಿಸುತ್ತಿರುವುದಲ್ಲದೇ ಸಂಚಾರ ವಿಭಾಗದ ಕೇಂದ್ರ ಸ್ಥಾನಕ್ಕೆ ರಸ್ತೆ ಸುರಕ್ಷತೆಯ ತರಬೇತಿಯ ಸಲುವಾಗಿ ಭೇಟಿ ನೀಡುವ ಶಾಲಾ ಮಕ್ಕಳು ಹಾಗೂ ವಾಹನ ಚಾಲಕರುಗಳಿಗೆ ಅತ್ಯಾಧುನಿಕ ತಂತ್ರಜ್ಞಾನದ ಪರಿಚಯವನ್ನು ಮಾಡಿಸಲಾಗುತ್ತಿರುತ್ತದೆ. |
| ಉ) | ಮಂಗಳೂರು ನಗರದಲ್ಲಿ ವಿವಿಧ ವೃತ್ತಗಳು ಹಾಗೂ ಮುಖ್ಯ ರಸ್ತೆಗಳಲ್ಲಿ ಹೆಚ್ಚುತ್ತಿರುವ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು 'ಫ್ರೀ ಲೆಫ್ಟ್' ವ್ಯವಸ್ಥೆ, ಒನ್‌ವೇ ಜಾರಿ, ಪಾರ್ಕಿಂಗ್ ಪ್ರದೇಶ ನಿಗಧಿ/ ನಿಯಂತ್ರಣ ಸೇರಿದಂತೆ ಇತರೆ ಅಗತ್ಯ ಸಂಚಾರ ಸುಧಾರಣಾ ಕ್ರಮಗಳನ್ನು ಕೈಗೊಳ್ಳದಿರಲು ಕಾರಣವೇನು; ಈ ಸಂಬಂಧ ವಿವಿಧ | ಮಂಗಳೂರು ನಗರದ ಕೆ.ಪಿ.ಟಿ. ಹಾಗೂ ನಂತೂರು ಜಂಕ್ಷನ್‌ನಲ್ಲಿ ಈಗಾಗಲೇ "ಫ್ರೀ ಲೆಫ್ಟ್ ಟರ್ನ್" ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದ್ದು ಹಂತ ಹಂತವಾಗಿ ನಗರದ ಇತರೆ ಸ್ಥಳಗಳಲ್ಲಿಯೂ ಕೂಡ "ಫ್ರೀ ಲೆಫ್ಟ್ ಟರ್ನ್" ವ್ಯವಸ್ಥೆಯನ್ನು ಜಾರಿಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಮಂಗಳೂರು ನಗರದಲ್ಲಿ ಈಗಾಗಲೇ ಕೆಲವೊಂದು ಸ್ಥಳಗಳಲ್ಲಿ ಒನ್-ವೇ ವ್ಯವಸ್ಥೆ ಜಾರಿಯಲ್ಲಿದೆ. ಹಂಪನಕಟ್ಟ ಮತ್ತು ಕಂಕನಾಡಿ ಪ್ರದೇಶದಲ್ಲಿ ಪಾರ್ಕಿಂಗ್ ಪ್ರದೇಶ ನಿಗದಿ/ನಿಯಂತ್ರಣ ಸೇರಿದಂತೆ ಇತರೇ ಅಗತ್ಯ ಸಂಚಾರ ಸುಧಾರಣಾ ಕ್ರಮಗಳನ್ನು |

| | | |
|---|---|---|
| | ಇಲಾಖೆಗಳೊಂದಿಗೆ ಸಾಧಿಸಿರುವ ಸಮನ್ವಯಿತ ಕ್ರಮಗಳು ಹಾಗೂ ಮುಂದಿನ ಕಾರ್ಯಯೋಜನೆಗಳ ವಿವರಗಳೇನು ? | ಕೈಗೊಳ್ಳಲಾಗುತ್ತಿದೆ. ಮಂಗಳೂರು ನಗರದಲ್ಲಿರುವ ಪ್ರಮುಖ ಜಂಕ್ಷನ್‌ಗಳ ಅಭಿವೃದ್ಧಿ ಬಗ್ಗೆ ಸಂಬಂಧಪಟ್ಟ ಇಲಾಖೆಗೆ ಪತ್ರ ವ್ಯವಹಾರ ಮಾಡಲಾಗಿರುತ್ತದೆ. **ಅನುಬಂಧ** ದಲ್ಲಿ ಒದಗಿಸಲಾಗಿದೆ. |

**ಹೆಚ್‌ಡಿ 134 ಎಸ್‌ಎಸ್‌ಟಿ 2026**

**(ಡಾ: ಜಿ.ಪರಮೇಶ್ವರ)**
ಗೃಹ ಸಚಿವರು.